ಅಧ್ಯಕ್ಷರು:– ಏನು ಇದು? ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೀರಿ. ನಾನು ಅದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೆ, ಬಹುಶಃ ಇವತ್ತೇ ಅಧಿವೇಶನದ ಕೊನೆಯ ದಿವಸವೆಂದು ಕಾಣುತ್ತದೆ.

ಅಧ್ಯಕ್ಷರು:– ಇಲ್ಲ, ಇವತ್ತೇ ಕೊನೆಯ ದಿವಸ ಅಲ್ಲ, ಆದ್ದರಿಂದ ನೀವು ನಾಳೆ ಹೇಳಿ.

5) ವಿಧಾನಸಭೆಯ ಸಭಾ ದಿನಗಳನ್ನು 100 ದಿವಸಗಳವರೆಗೆ ನಡೆಸುವುದು.

ಶ್ರೀ ಎಂ.ವಿ. ವೆಂಕಟಪ್ಪ:– ಆಯಿತು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಾಮಾನ್ಯವಾಗಿ ಐದು ವರ್ಷಕ್ಕೊಮ್ಮೆ ಯಾವುದೇ ಪಕ್ಷದ ಸದಸ್ಯರು ಚುನಾಯಿತರಾದ ಮೇಲೆ ಅವರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕಷ್ಟ ಸುಖಗಳ ಬಗ್ಗೆ ಇಲ್ಲಿ ಹೇಳುವುದು ಅವರ ಕರ್ತವ್ಯ ಮತ್ತು ಧರ್ಮ. ಆದರೆ ಈ ಸದನ ನಡೆದಿರುವ ದಿವಸಗಳ ಪಟ್ಟಿಯನ್ನು ನೋಡಿದರೆ ಸುಮಾರು 1956ನೇ ಇಸವಿಯಿಂದ 1992ರವರೆಗೆ, 1963ರಲ್ಲಿ ಮಾತ್ರ 98 ದಿವಸ ವಿಧಾನಸಭೆಯ ಅಧಿವೇಶನ ನಡೆದಿದೆ. ವಿಧಾನಸಭೆಯ ವರ್ಕಿಂಗ್ ಡೇಸ್. 66, 68, 64, 70, 73 ಮತ್ತು 97, 98 ದಿವಸ ನಡೆದಿರುವುದು ತಾವು ವಿಧಾನಸಭೆಯ ಸದಸ್ಯರಾಗಿದ್ದಾಗ 1963ನೇ ಇಸವಿಯಲ್ಲಿ. ಬಹುಶಃ ತಾವು ಆಗ ಜೋರಾಗಿ ಗಲಾಟೆ ಮಾಡಿದ ಹಾಗೆ ಕಾಣುತ್ತದೆ, ಅದಕ್ಕೋಸ್ಕರ 98 ದಿವಸ ನಡೆದಿದೆ.

ಅಧ್ಯಕ್ಷರು:– ನಾವು ಇಷ್ಟು ಗಲಾಟೆ ಮಾಡುತ್ತಿರಲಿಲ್ಲ. ಅದಕ್ಕೋಸ್ಕರ ಜಾಸ್ತಿ ದಿವಸ ಸಭೆ ನಡೆದಿದೆ.

ಶ್ರೀ ಎಂ.ವಿ. ವೆಂಕಟಪ್ಪ:– ನಾನು ಹೇಳುವುದು ಇಷ್ಟೇ ಅಧ್ಯಕ್ಷರೆ, ನಾವು ಚುನಾಯಿತರಾದ ಮೇಲೆ 1990–91, 1991–92ರಲ್ಲಿ ಮೊದಲಿನ ವರ್ಷ 67 ದಿವಸ ಅಧಿವೇಶನ ನಡೆದಿದೆ. ಹೋದವರ್ಷ 45 ದಿವಸ ಅಧಿವೇಶನ ನಡೆದಿದೆ. ಈಗ 34 ದಿವಸ ಅಂದರೆ ಈಗ ನಡೆದಿರುವ ಎರಡು ವಾರ ವರ್ಕಿಂಗ್ ಡೇಸ್ ಸೇರಿಕೊಂಡರೆ 44 ದಿವಸಗಳಾಯಿತು. 98 ದಿವಸಗಳೆಲ್ಲಿ? 44 ದಿವಸ ಎಲ್ಲಿ? ಹೀಗೆ ನಡೆದರೆ ಯಾವ ರೀತಿಯಲ್ಲಿ ಸದಸ್ಯರು ಅವರವರ ಕ್ಷೇತ್ರದ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಮತ್ತು ಕಷ್ಟ ಸುಖಗಳ ಬಗ್ಗೆ ಯಾವರೀತಿ ಹೇಳುವುದು? ನಮ್ಮ ಮತದಾರರು ಏನಿದ್ದಾರೆ ಅವರು ಈಗ ಚುರುಕಾಗಿದ್ದಾರೆ. ಯಾವಾಗಲೂ ಪತ್ರಿಕೆಗಳನ್ನು ಓದುತ್ತಾರೆ, ದೂರದರ್ಶನ ವೀಕ್ಷಿಸುತ್ತಾರೆ, ರೇಡಿಯೋ ಕೇಳುತ್ತಾರೆ ಇವುಗಳಲ್ಲಿ ನಾವು ಮಾತನಾಡಿದ ಮತ್ತು ಪ್ರಸ್ತಾಪ ಮಾಡಿದ ವಿಷಯಗಳು ಬಾರದಿದ್ದರೆ, ಏನು ನಿಮ್ಮದೇನೂ ಬರುವುದಿಲ್ಲ. ನೀವು ಏನು ಮಾಡುತ್ತೀರಿ? ನೀವೇನು ನಿದ್ದೆ ಮಾಡುತ್ತೀರಾ? ಶಾಸಕರ ಭವನದಲ್ಲಿ ಇಸ್ಪೀಟು ಆಡುತ್ತೀರಾ? ಶಾಸಕರ ಭವನದಲ್ಲಿ ಕುಳಿತುಕೊಂಡು ಏನು ಮಾಡುತ್ತೀರಿ ಎಂದು, ಹಾಗೆ ಕೇಳುವಷ್ಟು ಧೈರ್ಯ ಅವರಿಗೆ ಬಂದಿದೆ. ಮೊದಲಿನಹಾಗೆ ಕೇಳದಿರುವ ಪ್ರಶ್ನೆ ಈಗಿಲ್ಲ. ಅದಕ್ಕೋಸ್ಕರ ನಾನು ಹೇಳುವುದು ಒಂದು ವೇಳೆಯನ್ನು ನಿಗದಿ ಮಾಡಿ. ಉದಾಹರಣೆಗೆ ಲೋಕಸಭೆ ಅಥವಾ ರಾಜ್ಯಸಭೆಯನ್ನು ತೆಗೆದುಕೊಳ್ಳಿ. ಮೂರು ಅಧಿವೇಶನಗಳು ನಡೆಯುತ್ತವೆ. ಒಂದು ಬಜೆಟ್ ಅಧಿವೇಶನ, ಎರಡು ಮಾನ್‌ಸೂನ್ ಅಧಿವೇಶನ, ಮೂರು ಚಳಿಗಾಲದ ಅಧಿವೇಶನ. ಯಾವುದೇ ಅಧಿವೇಶನವಾಗಲಿ ಅವರು ಶುರು ಮಾಡುತ್ತಾರೆ. ಆದರೆ ನಮ್ಮ ವಿಧಾನಸಭೆ ಹೋದ ಸಾರಿ 34 ದಿವಸ ನಡೆದಿರುವುದು ಬಹಳ ಶೋಚನೀಯ. ಇದರಿಂದ ಸದಸ್ಯರುಗಳ ಹಕ್ಕನ್ನು ಮೊಟಕು ಮಾಡಿದ ಹಾಗೆ ಕಾಣುತ್ತದೆ. ಈಗ ಹೊಸ ವರ್ಷ 1993ನೇ ಇಸವಿ ಪ್ರಾರಂಭವಾಗಿದೆ. ಈ ವರ್ಷದಲ್ಲಾದರೂ ವರ್ಕಿಂಗ್ ಡೇಸ್ ನಮಗೆ ಬೇಕಾಗಿರುವುದು 100–125 ದಿವಸ ಕನಿಷ್ಠ ಪಕ್ಷ ಅಷ್ಟಾದರೂ ಮಾಡಿ. ರೂಲ್ಸ್ ಕಮಿಟಿಗೆ ತಾವೇ ಅಧ್ಯಕ್ಷರಾಗಿದ್ದೀರಿ, ರೂಲ್ಸ್ ಏನು ಮಾಡಿದ್ದೀರಿ? ಅದರಲ್ಲಿ 120 ರಿಂದ 150 ದಿವಸ ವರ್ಕಿಂಗ್ ಡೇಸ್ ಮಾಡಬೇಕೆಂದು

ನಾವು ರೆಕ್‌ಮಂಡ್ ಮಾಡುತ್ತಿದ್ದೇವೆ. ಆದು ರೂಲ್ಸ್ ಕಮಿಟಿಯಲ್ಲಿ ಪಾಸ್ ಆದಮೇಲೆ ಗೊತ್ತಾಗುತ್ತದೆ. ಆದಕ್ಕೋಸ್ಕರ ಸರ್ಕಾರದವರು ನಿಗದಿಯಾದ ಉತ್ತರವನ್ನು ಹೇಳಬೇಕು. ಪುನಃ ಸಭೆಯನ್ನು ಯಾವಾಗ ಕರೆಯುತ್ತಿರೋ ಗೊತ್ತಿಲ್ಲ. 22ನೇ ತಾರೀಖು ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಎಂದು ಹೇಳುತ್ತಾರೆ. ಆದರೆ ಸಂತೋಷ. ಆದಕ್ಕೆ ಮೊದಲು ರಾಜ್ಯಪಾಲರ ಭಾಷಣ ಆಗಬೇಕು. ಅದಕ್ಕೆ ಎರಡುವಾರ ಬೇಕಾಗುತ್ತದೆ. ಇದಕ್ಕೆ ಸರ್ಕಾರ ಸರಿಯಾಗಿ ಉತ್ತರ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೆ, ಈಗಾಗಲೇ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಚರ್ಚೆ ಆದಾಗ ಸಭಾನಾಯಕರು ಸದನವನ್ನು ನೂರು ದಿವಸ ನಡೆಸಬೇಕು ಅನ್ನುವುದನ್ನು ಒಪ್ಪಿಕೊಂಡಿದ್ದಾರೆ. ಫೆಬ್ರವರಿ 12ನೇ ತಾರೀಖಿನಿಂದ ಆದು ಪ್ರಾರಂಭವಾಗುತ್ತದೆ ಎಂದು ಆಗಲೇ ನಿಶ್ಚಯ ಮಾಡಿದೆ. ಬಹುಶಃ ಆದರ ವಿವರವನ್ನು ತಾವು ಒದಗಿಸಿಕೊಟ್ಟಿರೆ ಅನುಕೂಲ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ತಾವು ಇದನ್ನು ಒಪ್ಪಿದ್ದೀರಿ ಒಳ್ಳೆಯದು. ಅನೇಕ ಸಾರಿ ಹೇಳಿದ್ದೀರಿ. ಈ ಸದನ ನೂರು ದಿನಗಳ ಮೇಲೆ ನಡೆಯಬೇಕು ಅನ್ನತಕ್ಕಂಥಾದ್ದನ್ನು ಸಾರ್ವಜನಿಕವಾಗಿ ಹೇಳಿದ್ದೀರಿ ಮತ್ತು ತಮ್ಮ ಅಧ್ಯಕ್ಷರ ಸಭೆಗಳಲ್ಲೂ ಹೇಳಿದ್ದೀರಿ. ಇಲ್ಲೂ ಹೇಳಿದ್ದೀರಿ. ಈ ಸಭೆಯ ಬಗ್ಗೆ ತಮಗೆ ಇರತಕ್ಕಂತಹ ಕಳಕಳಿಯನ್ನು ನಾವು ಮೆಚ್ಚುತ್ತೇವೆ. ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇತ್ತೀಚಿನ ದಿನಗಳಲ್ಲಿ ನಿಜವಾಗಿಯೂ ಈ ಸದನದ ಒಂದು ವೇಳೆಯನ್ನು ಮೊಟಕು ಮಾಡತಕ್ಕಂಥಾದ್ದು ಸರ್ಕಾರದ ಒಂದು ವ್ಯವಸ್ಥಿತವಾದಂತಹ ಒಂದು ಪಿತೂರಿ ಏನೋ ಎಂದು ಅನಿಸಿ ನೋವಾಗುತ್ತದೆ. ದಯಮಾಡಿ ತಮಗೆ ಹೇಳುತ್ತಿದ್ದೇನೆ ಇದು ನೂರು ದಿನದ ಮೇಲೆ ನಡೆಯತಕ್ಕಂತಹ ಒಂದು ವ್ಯವಸ್ಥೆ ಆಗಬೇಕು. ಮತ್ತೊಂದು ತಮ್ಮಲ್ಲಿ 2–3 ಸಾರಿ ಮನವಿ ಮಾಡಿದೆ. ಯಾರು ಸದಸ್ಯರು ಇಲ್ಲಿ ಪ್ರತಿದಿನ ಹಾಜರು ಇರುತ್ತಾರೆ, ಆ ಸದಸ್ಯರ ಬಗ್ಗೆ ತಾವು ಸ್ವಲ್ಪ ಅನುಕಂಪ ಕರುಣೆ ಯಾವುದಾದರೂ ಒಂದು ರೀತಿ ಬಹುಮಾನ ಕೊಡಬೇಕಾಗುತ್ತದೆ, ನಮಗೆ ಬಹುಮಾನ ಕೊಡಿ. ನಾವು 3–4 ಜನ ಇಲ್ಲಿ ಯಾವತ್ತೂ ಇಲ್ಲಿ ಹಾಜರಿರುತ್ತೇವೆ ನೋಡಿ. ನೀವು ಇಲ್ಲಿ ಹಾಜರಿ ಬುಕ್ ತೆಗೆದುನೋಡಿ.

ಅಧ್ಯಕ್ಷರು:– ಒಂದು ತಿದ್ದುಪಡಿ, ನೀವು ಹೊರಗಡೆ ಹೋದಾಗ ಹಾಜರಿ ಇರೋದಿಲ್ಲ, ಸಭಾತ್ಯಾಗ ಮಾಡಿದಾಗ ನೀವು ಹಾಜರಿ ಇರುವುದಿಲ್ಲವಲ್ಲ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಸಭಾತ್ಯಾಗ ಒಂದು ಬಿಟ್ಟು ಮಿಕ್ಕ ಎಲ್ಲಾ ಫಳಿಗೆಯಲ್ಲೂ ಇದ್ದೇನೆ.

ಅಧ್ಯಕ್ಷರು:– ನೀವು ಯಾವಾಗಲೂ ಇರುತ್ತೀನಿ ಅಂದರಲ್ಲ ಅದಕ್ಕೆ ತಿದ್ದುಪಡಿ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ತಮ್ಮಲ್ಲಿ ಮತ್ತೊಂದು ಮನವಿ ಮಾಡುತ್ತಿದ್ದೇನೆ. ಈ ಸದನ ಸಭೆ ನೂರು ದಿವಸ ಆಗಬೇಕು ಎನ್ನುವುದು ನಮ್ಮದು ಒತ್ತಾಯ ಏನೋ ಸರಿ. ಈ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ನೆರೆಹಾವಳಿ ಬಗ್ಗೆ ನಿನ್ನೆ ಈ ಸದನದಲ್ಲಿ ಚರ್ಚೆ ನಡೆಯುವಾಗ 16 ಜನ ಇರಲಿಲ್ಲ. ನಾವು ನೂರು ದಿನ ಕೇಳುತ್ತಿದ್ದೇವೆ. ನಿನ್ನೆ 15 ಜನ ಸದಸ್ಯರು ಈ ಸದನದಲ್ಲಿ ಇರಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸದಸ್ಯರು ಅದನ್ನು ಕಲಿತುಕೊಳ್ಳಬೇಕಲ್ಲ. ನಾವು ಸದನದ ವೇಳೆಯನ್ನು ಜಾಸ್ತಿ ಮಾಡಿ ಎನ್ನತಕ್ಕಂಥಾದ್ದು ಒಂದು ಕಡೆ ಆದರೆ ಸದನದಲ್ಲಿ ಪ್ರಮುಖವಾದಂತಹ ಚರ್ಚೆ ನಡೆಯುವಾಗ ಎಲ್ಲಾ ಸದಸ್ಯರು ಇಲ್ಲಿ ಹಾಜರಿರಬೇಕು. ತಮ್ಮ ಕಾರ್ಯಾಲಯದಿಂದ ಕರೆ ಗಂಟೆ ಬರುತ್ತಿರುವಾಗ ಸುಮಾರು 25 ನಿಮಿಷ ಗಂಟೆಯ ಶಬ್ದ ಬಾರಿಸುತ್ತಾ ಇದ್ದರೂ ಇಲ್ಲಿ ನಮಗೆ ಇನ್ನೂ ಹಾಜರಿ ಸರಿಯಾದ ರೀತಿ ಬರಲಿಲ್ಲ. ತಮ್ಮ ಗಮನಕ್ಕೆ ಇದು ನಿನ್ನೆ ಬಂದಿರಬಹುದು. ನಾನು ಈ ಮನವಿಯನ್ನು ಮಾಡುತ್ತಿದ್ದೇನೆ. ಇದಕ್ಕೆ ಯಾರನ್ನೂ

ನಾನು ಆಕ್ಷೇಪಣೆ ಮಾಡುತ್ತಾ ಇಲ್ಲ. ಈ ಸದನದ ಬಗ್ಗೆ ಸದಸ್ಯರುಗಳಿಗೂ ಕಳಕಳಿ ಇರಬೇಕು ಎನ್ನತಕ್ಕಂಥಾದ್ದನ್ನು ಈ ಮೂಲಕ ನಾನು ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನೂರು ದಿವಸ ಈ ಶಾಸನಸಭೆ ಕೆಲಸಕಾರ್ಯಗಳನ್ನು ನಡೆಸಬೇಕು ಎಂದು ಹೇಳಿ ತಾತ್ವಿಕವಾಗಿ ಒಪ್ಪಿಗೆಯಾಗಿದೆ. ಯಾವ ಯಾವ ತಾರೀಖಿನಿಂದ ಮಾಡಬೇಕು ಎನ್ನುವುದು ನಿಶ್ಚಯ ಆಗುತ್ತದೆ. ಇವತ್ತು ಅಥವಾ ನಾಳೆ ಒಳಗಾಗಿ ಈ ಸಭೆ ಮುಗಿಯುವುದರೊಳಗಾಗಿ ಇಡೀ ವರ್ಷದ ಕಾರ್ಯಕ್ರಮವನ್ನು ತಾರೀಖುವಾರು ನಿಶ್ಚಯಮಾಡಿ ಅನೌನ್ಸ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಇವತ್ತೇ ಕೊನೆಯ ದಿವಸ ಎಂದು ಇತ್ತು. ಆದ್ದರಿಂದ ಅದು ಗೊತ್ತಾಗುತ್ತಾ ಇಲ್ಲ. ಏನಾದರೂ ಇನ್ನೂ 4-5 ದಿವಸ ಸಭೆ ಮುಂದೆ ಹೋಗುತ್ತದೆಯೋ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇವತ್ತು ಕೊನೇ ಆಗುವುದಾದರೆ ಇವತ್ತೇ ಅನೌನ್ಸ್ ಮಾಡುತ್ತೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅಧ್ಯಕ್ಷರೆ, ಇವರು ಕಾಲ ನಿಗದಿ ಮಾಡುತ್ತೇವೆ ಎಂದು ಹೇಳಿದರು. ಹಿಂದೆ ಈ ಸಭೆ ಬಜೆಟ್ ಅಧಿವೇಶನ, ದಸರಾ ಅಧಿವೇಶನ, ಚಳಿಗಾಲದ ಅಧಿವೇಶನ ಎಂದು ಹೇಳಿ ನಡೆಯುತ್ತಾ ಇತ್ತು. ಈಗ ಆ ಪದ್ಧತಿ ಎಲ್ಲಾ ಹೋಗಿಬಿಟ್ಟಿದೆ. ಆದ್ದರಿಂದ ಆ ಕಾಲಗಳನ್ನು ನಿಗದಿ ಮಾಡಿದರೆ ಒಳ್ಳೆಯದು.

6) ದೈಹಿಕ ತರಬೇತಿ ಪಡೆದ ನಿರುದ್ಯೋಗಿಗಳು.

ಶ್ರೀ ಕೆ. ಹರ್ಷಕುಮಾರ್‌ಗೌಡ:- ಅಧ್ಯಕ್ಷರೆ, ಈ ರಾಜ್ಯದಲ್ಲಿ ಇದು ಒಂದು ಯುವಕರ ಉದ್ಯೋಗದ್ದು ಒಂದು ಪ್ರಮುಖವಾದಂತಹ ವಿಚಾರ. ಈ ದೈಹಿಕ ಶಿಕ್ಷಕರ ತರಬೇತಿ ಪಡೆದಂತಹ ಸುಮಾರು 26 ಸಾವಿರಕ್ಕೂ ಮಿಗಿಲಾದಂತಹ ಯುವಕರು ರಾಜ್ಯದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಆದರೆ ರಾಜ್ಯದ ಶಿಕ್ಷಣ ಇಲಾಖೆ ಇದುವರೆಗೂ ಕೂಡ ಅವರಿಗೆ ಉದ್ಯೋಗವನ್ನು ಕೊಡುವ ನಿಟ್ಟಿನಲ್ಲಿಯೂ ಕೂಡ ಯಾವುದೇ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಿಲ್ಲ ಎಂದು ಹೇಳಿ ಆ ಯುವಕರು ಪ್ರತಿನಿತ್ಯ ಎಲ್ಲಾ ಶಾಸಕರನ್ನು ಭೇಟಿ ಮಾಡಿ, ಇವತ್ತು ಕೂಡ ನಮ್ಮ ಹತ್ತಿರ ಬಂದಿದ್ದಾರೆ. ಕಳೆದ ಸಾರಿ ನಮ್ಮ ಮಾನ್ಯ ಶಿಕ್ಷಣ ಸಚಿವರ ಹತ್ತಿರ ನಾವು ಪ್ರಶ್ನೆ ಕೇಳಿದಾಗ ಅವರು ಕರ್ನಾಟಕ ರಾಜ್ಯದಲ್ಲಿ 651 ಸಿಪಿಎಡ್ ಉದ್ಯೋಗಗಳು ಮಾತ್ರ ಖಾಲಿ ಇವೆ ಎಂದು ಹೇಳಿದರು. ಆದರೆ ಈಗ ಸುಮಾರು 12 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ತಿಳಿದುಬಂದಿದೆ. ಜೊತೆಗೆ ಇವರಿಗೆ ಆಗಲೇ ವಯಸ್ಸು ಆಗುತ್ತಾ ಇದೆ. 1987ರಂದು ಸುಮಾರು 15 ರಿಂದ 20 ಸಾವಿರ ಶಿಕ್ಷಕರನ್ನು ಆಯ್ಕೆ ಮಾಡಿದೆ. ಸರ್ಕಾರ ಈಗಾಗಲೇ ಅದರ ಬಗ್ಗೆ ಕಾರ್ಯಪ್ರವೃತ್ತವಾಗಿದೆ. ಆದರೆ ಈವರೆಗೂ ಕೂಡ ದೈಹಿಕ ಶಿಕ್ಷಕರನ್ನು ಆಯ್ಕೆ ಮಾಡುತ್ತಿಲ್ಲ, ಏಕೆ? ಏಕೆಂದರೆ ಇವತ್ತು ಮಕ್ಕಳಲ್ಲಿ ಈ ಕ್ರೀಡೆಯ ಬಗ್ಗೆ ಒಂದು ತರಬೇತಿಯಾಗಲಿ, ಅದರ ಬಗ್ಗೆ ಪ್ರೋತ್ಸಾಹ ಕೊಡುವಂತಹ ವ್ಯವಸ್ಥೆ ಆಗದೆ ಇದ್ದರೆ ಹೇಗೆ? ಮಾನ್ಯ ಮಂತ್ರಿಗಳಾದ ರಾಮಸ್ವಾಮಿಯವರು ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ಸೇವೆ ಸಲ್ಲಿಸುತ್ತಿದ್ದಾರೆ. ತಮಗೆ ಗೊತ್ತಿರಬಹುದು. ಇಡೀ ರಾಜ್ಯದಲ್ಲಿ ಏಡೆಡ್ ಸ್ಕೂಲ್‌ಗಳಲ್ಲಿ ಶಿಕ್ಷಕರ ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿಲ್ಲ. ಅಧ್ಯಕ್ಷರೆ ಇದುವರೆಗೂ ಸರ್ಕಾರದಲ್ಲಿ ಆದೇಶ ಇದೆ. 6 + 1, 4+1, ಆಯ್ಕೆ ಮಾಡಬೇಕೆಂದು ಇದೆ. ಅರೆಸರ್ಕಾರಿ ಶಿಕ್ಷಣ ಸಂಸ್ಥೆಯಲ್ಲಿ ಇದುವರೆಗೂ ಈ ದೈಹಿಕ ಶಿಕ್ಷಕರ ಆಯ್ಕೆ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ತುರ್ತಾಗಿ ಕಾರ್ಯ ಪ್ರವೃತ್ತರಾಗಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಅರಿಕೆ. ಇಂಥ ವಿಷಯಗಳನ್ನು ತರುವುದಕ್ಕೆ ನಮ್ಮ ನಿಯಮಾವಳಿಯಲ್ಲಿ ಅನೇಕ ಅವಕಾಶಗಳು ಇವೆ. ಗಮನ